ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1883 (2154)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಕೆ.ಪಿ.ಎಸ್.ಸಿ ಯ 2015ನೇ ಸಾಲಿನಲ್ಲಿ ಸಹಾಯಕ ಕಮೀಷನರ್ (ಗ್ರೂಪ್-ಎ) ನೇಮಕಾತಿ ಕುರಿತು

(ಅ) ಕರ್ನಾಟಕ ಲೋಕಸೇವಾ ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆಸಲಾದ ಪರೀಕ್ಷೆಯಲ್ಲಿ ಎಷ್ಟು ಸಹಾಯಕ ಕಮೀಷನ್ (ಗ್ರೂಪ್-ಎ) ಮೂಲವೃಂದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಹುದ್ದೆಗಳಿಗೆ ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ;

(ಆ) ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡುವ ಮುನ್ನ ದಾಖಲಾತಿಗಳ ಪರಿಶೀಲನೆಗಾಗಿ ದಾಖಲಾತಿಗಳನ್ನು ಒದಗಿಸಲು ತಿಳಿಸಿದ ನಂತರವೂ, ದಾಖಲಾತಿಗಳನ್ನು ಒದಗಿಸದೇ ಗೈರು ಹಾಜರಾದ ಅಥವಾ ಹುದೆಗೆ ಹಾಜರಾಗುವುದಿಲ್ಲವೆಂದು ಲಿಖಿತ ಮೂಲಕ ತಿಳಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

(ಇ) ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರು ಆಯ್ಕೆಯಾಗಿರುವ ಮೀಸಲಾತಿಯ ಪ್ರವರ್ಗಗಳ ವಿವರಗಳನ್ನು ನೀಡುವುದು;

(ಈ) ಆಯ್ಕೆ ಮಾಡಿದ ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡಿದ ನಂತರವೂ ಈವರೆವಿಗೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರು ಆಯ್ಕೆಯಾಗಿರುವ ಮೀಸಲಾತಿ ಪ್ರವರ್ಗಗಳ ವಿವರಗಳನ್ನು ನೀಡುವುದು)